## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1357 (1543) |
| 2 | ಸದಸ್ಯರ ಹೆಸರು | : | ಶ್ರೀ ಸಿ.ಟಿ.ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 21.03.2025 |
| 4 | ಉತ್ತರಿಸುವ ಸಚಿವರು | : | ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 2 ವರ್ಷದಿಂದ ಶಾಸಕರ ಪ್ರದೇಶಾಭಿವೃದ್ಧಿ ನಿಧಿಗೆ ಒದಗಿಸಿದ್ದ ಅನುದಾನವನ್ನು ಸರ್ಕಾರದ ಖಾತೆಗೆ ವಾಪಸ್ ಪಡೆದಿರುವ ಪ್ರಕರಣಗಳೆಷ್ಟು; ಈ ರೀತಿ ವಾಪಸ್ ಪಡೆಯಲು ಕಾರಣಗಳೇನು; (ಜಿಲ್ಲಾವಾರು ವಿವರ ನೀಡುವುದು) | ಕಳೆದ 2 ವರ್ಷದಿಂದ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಗೆ ಒದಗಿಸಿದ್ದ ಅನುದಾನವನ್ನು ಸರ್ಕಾರದ ಖಾತೆಗೆ ವಾಪಸ್ ಪಡೆದಿರುವುದಿಲ್ಲ.<br><br>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಕಂಡಿಕೆ 4.1 ಪ್ರಕಾರ ಎರಡು ವರ್ಷಗಳ ಹಿಂದಿನ ಅನುದಾನದಲ್ಲಿ ಕಾಮಗಾರಿಗಳು ಪ್ರಾರಂಭಗೊಳದ್ದೇ ಇದ್ದಾಗ, ಅಂತಹ ಕಾಮಗಾರಿಗಳ ಅನುದಾನವನ್ನು ವಾಪಸ್ಸು ಪಡೆಯಲಾಗಿದೆ. ಈ ರೀತಿ ವಾಪಸ್ಸು ಪಡೆದಿರುವ ಅನುದಾನದ ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ಶಾಸಕರು ಸೂಚಿಸಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ತೊಡಕುಗಳಿದ್ದಲ್ಲಿ ಸಂಬಂಧಿಸಿದ ಶಾಸಕರ ಗಮನಕ್ಕೆ ತರಬೇಕೆನ್ನುವುದು ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿಯಲ್ಲಿದೆಯೇ: | **ಹೌದು**<br><br>ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿ ಕಂಡಿಕೆ 3.3 ರನ್ವಯ "ಜಿಲ್ಲಾಧಿಕಾರಿಗಳು ಕಾಮಗಾರಿಯನ್ನು ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಪರಿಶೀಲಿಸತಕ್ಕದ್ದು ಹಾಗೂ ಮಂಜೂರಾತಿ ಪತ್ರವನ್ನು ನೀಡಬೇಕು ಮತ್ತು ಅದನ್ನು ಶಾಸಕರಿಗೆ ತಿಳಿಸಬೇಕು. ಒಂದು ವೇಳೆ ಕಾಮಗಾರಿಗೆ ನಿವೇಶನ ಲಭ್ಯವಿರದಿದ್ದರೆ, ಕಾಮಗಾರಿಯನ್ನು ಕೈಗೊಳ್ಳಲು ಅಡೆತಡೆಗಳಿದ್ದರೆ, ಇದನ್ನು ಶಾಸಕರು ಪ್ರಸ್ತಾವನೆ ಕಳುಹಿಸಿದ ದಿನಾಂಕದಿಂದ 30 ದಿನದೊಳಗೆ ತಿಳಿಸಬೇಕು" ಎಂದಿರುತ್ತದೆ. |

| | ಪ್ರಶ್ನೆ | ಉತ್ತರ |
|---|---|---|
| ಇ) | ಇದ್ದಲ್ಲಿ, ಸರ್ಕಾರಕ್ಕೆ ಅನುದಾನ ವಾಪಸ್ ಪಡೆಯುವ ಮೊದಲು ಈ ರೀತಿ ಮಾರ್ಗಸೂಚಿಯನ್ನು ಪಾಲಿಸಲಾಗಿದೆಯೆ ಅಥವಾ ಇಲ್ಲವೆ ಎಂಬುದರ ಬಗ್ಗೆ ಪರಿಶೀಲನೆ ನಡೆಸಲಾಗಿದೆಯೇ: ಪರಿಶೀಲಿಸಲಾಗಿದ್ದರೆ. ಮಾರ್ಗಸೂಚಿ ಪ್ರಕಾರ ಸಂಬಂಧಿಸಿದ ಶಾಸಕರಿಗೆ ಮಾಹಿತಿ ಒದಗಿಸಲು ವಿಫಲರಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದೇ: | ಎರಡು ವರ್ಷಗಳಾದರೂ ಕ್ರಿಯಾಯೋಜನೆ ಸಲ್ಲಿಸದೇ ಇರುವ ಮಾಹಿತಿ ಮಾನ್ಯ ಶಾಸಕರುಗಳ ಗಮನದಲ್ಲಿರುತ್ತದೆ. ಜಿಲ್ಲಾಧಿಕಾರಿಗಳು/ ಉಪವಿಭಾಗಾಧಿಕಾರಿಗಳು ಆರ್ಥಿಕ ವರ್ಷದ ಮೊದಲ ಮಾಹೆಯಲ್ಲೇ 2 ಕೋಟಿಗಳಿಗೆ ಕ್ರಿಯಾ ಯೋಜನೆ ಪಡೆಯುವಂತೆ ಕೆಲ್ಯಾಡ್ಸ್ ಮಾರ್ಗಸೂಚಿ ಕಂಡಿಕೆ 3.2 ಮತ್ತು ಹಲವು ಸುತ್ತೋಲೆಗಳಲ್ಲಿ ತಿಳಿಸಿದ್ಯಾಗೂ ಮಾನ್ಯ ಶಾಸಕರುಗಳು ಕ್ರಿಯಾಯೋಜನೆಯನ್ನು ಸಲ್ಲಿಸದೇ ಇದ್ದಲ್ಲಿ ಅಧಿಕಾರಿಗಳು ಅನುದಾನವನ್ನು ಎರಡು ವರ್ಷದ ನಂತರ ಸರ್ಕಾರಕ್ಕೆ ಜಮೆ ಮಾಡುವುದು ಕರ್ತವ್ಯವಾಗಿರುತ್ತದೆ. |
| ಈ) | ಅಧಿಕಾರಿಗಳ ನಿರ್ಲಕ್ಷದಿಂದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿಳಂಬವಾಗಿ ಸರ್ಕಾರಕ್ಕೆ ಅನುದಾನ ವಾಪಸ್ ಹೋಗಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ: ವಾಪಸ್ ಪಡೆದಿರುವ ಅನುದಾನವನ್ನು ಪುನ: ಬಿಡುಗಡೆ ಮಾಡಲಾಗುವುದೆ? | ಅಧಿಕಾರಿಗಳ ಕರ್ತವ್ಯ ಲೋಪದಿಂದ ಅನುದಾನ ವಾಪಸ್ಸು ಪಡೆದಿರುವುದಿಲ್ಲ, ಮಾನ್ಯ ಶಾಸಕರುಗಳೇ ಕಾಮಗಾರಿಗಳನ್ನು ನೀಡದೇ ಇದ್ದಲ್ಲಿ ಅನುದಾನವನ್ನು ವಾಪಸ್ಸು ಮಾಡುವುದು ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ವಾಪಸ್ಸು ಪಡೆದಿರುವ ಅನುದಾನವನ್ನು ಇಲಾಖಾ ಸಚಿವರ ವಿವೇಚನೆಯಲ್ಲಿ ಆಧ್ಯತೆಯ ಮೇರೆಗೆ ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗುತ್ತಿದೆ. |

ಸಂಖ್ಯೆ:ಪಿಡಿಎಸ್/39/ಕೆಎಲ್ ಎಸ್/2025.

(ಡಿ. ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು.

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1357 (1543)ರ ಅನುಬಂಧ-1

### ಕಳೆದ ಎರಡು ವರ್ಷಗಳಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ರಾಷ್ಟ್ರೀಕೃತ ಬ್ಯಾಂಕ್ ಖಾತೆಗೆ ಜಮೆಯಾಗಿರುವ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಜಿಲ್ಲೆ | 2022-23ನೇ ಸಾಲಿನಲ್ಲಿ ಜಮೆಯಾಗಿರುವ ಅನುದಾನ | 2023-24ನೇ ಸಾಲಿನಲ್ಲಿ ಜಮೆಯಾಗಿರುವ ಅನುದಾನ * | ಒಟ್ಟು ಅನುದಾನ |
|---|---|---|---|---|
| 1 | 2 | 3 | 4 | 5 (3+4) |
| 1 | ಬಾಗಲಕೋಟೆ | 0.00 | 0.00 | 0.00 |
| 2 | ಬಳ್ಳಾರಿ | 0.00 | 0.00 | 0.00 |
| 3 | ಬೆಳಗಾವಿ | 0.00 | 0.00 | 0.00 |
| 4 | ಬೆಂಗಳೂರು ಗ್ರಾಮಾಂತರ | 0.00 | 0.00 | 0.00 |
| 5 | ಬೆಂಗಳೂರು ನಗರ | 0.00 | 0.00 | 0.00 |
| 6 | ಬೀದರ್ | 0.00 | 0.00 | 0.00 |
| 7 | ಚಾಮರಾಜನಗರ | 0.00 | 0.00 | 0.00 |
| 8 | ಚಿಕ್ಕಬಳ್ಳಾಪುರ | 0.00 | 0.00 | 0.00 |
| 9 | ಚಿಕ್ಕಮಗಳೂರು | 22.00 | 0.00 | 22.00 |
| 10 | ಚಿತ್ರದುರ್ಗ | 64.00 | 0.00 | 64.00 |
| 11 | ದಕ್ಷಿಣ ಕನ್ನಡ | 0.00 | 0.00 | 0.00 |
| 12 | ಧಾರವಾಡ | 0.00 | 0.00 | 0.00 |
| 13 | ದಾವಣಗೆರೆ | 0.00 | 0.00 | 0.00 |
| 14 | ಗದಗ | 0.00 | 0.00 | 0.00 |
| 15 | ಹಾಸನ | 0.00 | 0.00 | 0.00 |
| 16 | ಹಾವೇರಿ | 0.00 | 0.00 | 0.00 |
| 17 | ಕಲಬುರಗಿ | 13.00 | 0.00 | 13.00 |
| 18 | ಕೊಡಗು | 0.00 | 0.00 | 0.00 |
| 19 | ಕೋಲಾರ | 0.00 | 0.00 | 0.00 |
| 20 | ಕೊಪ್ಪಳ | 0.00 | 0.00 | 0.00 |
| 21 | ಮಂಡ್ಯ | 19.50 | 0.00 | 19.50 |
| 22 | ಮೈಸೂರು | 0.00 | 0.00 | 0.00 |
| 23 | ರಾಯಚೂರು | 44.00 | 0.00 | 44.00 |
| 24 | ರಾಮನಗರ | 46.79 | 0.00 | 46.79 |
| 25 | ಶಿವಮೊಗ್ಗ | 0.00 | 0.00 | 0.00 |
| 26 | ತುಮಕೂರು | 0.00 | 0.00 | 0.00 |
| 27 | ಉಡುಪಿ | 57.69 | 0.00 | 57.69 |
| 28 | ಉತ್ತರ ಕನ್ನಡ | 33.64 | 0.00 | 33.64 |
| 29 | ವಿಜಯನಗರ | 0.00 | 0.00 | 0.00 |
| 30 | ವಿಜಯಪುರ | 0.00 | 0.00 | 0.00 |
| 31 | ಯಾದಗಿರಿ | 0.00 | 0.00 | 0.00 |

* ಕೆಲ್ಯಾಡ್ಸ್ ಯೋಜನೆಯ ಮಾರ್ಗಸೂಚಿ ಕಂಡಿಕೆ-4.1 ರನ್ವಯ ಎರಡು ವರ್ಷಗಳ ವರೆಗೆ ಕಾಮಗಾರಿ ಅನುಷ್ಠಾನಕ್ಕೆ ಅವಕಾಶವಿದೆ.

ನಿರ್ದೇಶಕರು
ಪ್ರದೇಶಾಭಿವೃದ್ಧಿ ಮಂಡಳಿ
ಯೋಜನಾ ಇಲಾಖೆ